# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀವಿಶ್ವಕರ್ಮ ಮಹಾತ್ಮೆ

## (ಭಸ್ಮಾಸುರ ಮೋಹಿನಿ ಪ್ರಸಂಗ ಸಹಿತ)


ಕವಿ

## ಅಗರಿ ಭಾಸ್ಕರ ರಾವ್



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಜೈಮಿನಿ ಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಹೇರಂಜೆ ಕೃಷ್ಣ ಭಟ್ಟ , ಸೇವಧಿ ಪ್ರಕಾಶನ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೩೮

**ಪಾತ್ರಗಳು:**

ಸುವೃತಾಖ್ಯ, ಗುರು ಸಾಮಂತ, ಈಶ್ವರ, ಪಾರ್ವತಿ, ಭಸ್ಮಾಸುರ, ದೇವೇಂದ್ರ, ವಿಷ್ಣು, ಬ್ರಹ್ಮ, ಮೋಹಿನಿ, ಕಾಳಹಸ್ತಿ ಮುನಿ, ಸಪ್ತರ್ಷಿಗಳು

**ಕಥಾಸಾರಾಂಶ:**

ಆನೆಗೊಂದಿಯ ರಾಜ ಸುವೃತಾಖ್ಯ. ಅವನಿಗೆ ಕುಲಗುರುಗಳು ಕಾಳಹಸ್ತಿಯ ಮಹಿಮೆಯನ್ನು ಹೇಳುವುದು. ಶಿವನಿಗೆ ಗಿರಿಜೆಯು ತಂದುಕೊಟ್ಟ ಭಸ್ಮದಲ್ಲಿದ್ದ ಕಲ್ಲು ಬಿಸಾಡಿದಾಗ ಭಸ್ಮಾಸುರನ ಹುಟ್ಟು. ಅವನಿಗೆ ವಹಿಸಿದ ಭಸ್ಮ ತರುವ ಕೆಲಸಕ್ಕೆ ಅನಲಹಸ್ತ ಬೇಡುವುದು. ಶಿವನನ್ನೇ ಸುಡಲು ಬಂದಾಗ ಹರಿಯ ಮೋಹಿನಿಯ ಅವತಾರದಿಂದ ಭಸ್ಮಾಸುರನ ಹನನ. ಶಿವನು ಮೋಹಿನಿಯಲ್ಲಿ ಅನುರಕ್ತನಾದಾಗ ಗಿರಿಜೆಯ ಶಾಪದಿಂದ ಕಾಳಹಸ್ತಿಯಲ್ಲಿ ಋಷಿಯಾಗಿ ಹುಟ್ಟಿ ಕಾಶಿಗೆ ಪ್ರಯಾಣ. ಸುವೃತಾಖ್ಯ ಕಾಶಿಗೆ ಹೋಗಿ ಅವನಿಂದ ಜ್ಞಾನವನ್ನು ಬೇಡುವುದು. ಕಾಳಹಸ್ತಿಮುನಿಯು ಅವನಿಗೆ ವಿಶ್ವಕರ್ಮ ತತ್ವವನ್ನು ಬೋಧಿಸುವುದು. ರಾಜನು ಕಾಳಹಸ್ತಿಮುನಿಗೆ ಸಪ್ತರ್ಷಿಗಳಿಂದ ಜಗದ್ಗುರು ಪಟ್ಟವನ್ನು ಕೊಡುವುದು.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಕವಿಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಯಕ್ಷವಾಹಿನಿಯ ಯಕ್ಷಪ್ರಸಂಗ ಯಾದಿ)**

ಅಗರಿ ಭಾಸ್ಕರ ರಾಯರು (ಜನನ 1948) ಭಾಗವತರಾದ ಅಗರಿ ಶ್ರೀನಿವಾಸ ರಾಯರ ಮಗ, ತಾಯಿ ರುಕ್ಮಿಣಿ, ಪತ್ನಿ ಜಲಜಾಕ್ಷಿ. ಸ್ವತಃ ಭಾಗವತರೂ ಹೌದು. ಸುಮಾರು ಮುವತ್ತಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದ್ದಾರೆ. ಕೆಲವು ಹಸ್ತಪ್ರತಿಗಳು ಅವರಲ್ಲೂ ಲಭ್ಯವಿಲ್ಲ. ಇವರ ಗುಂಡಬಾಳ ಕ್ಷೇತ್ರ ಮಹಾತ್ಮೆ ಅತ್ಯಂತ ಹೆಚ್ಚು ಪ್ರದರ್ಶನ ಕಂಡಿದೆ. ಸುರತ್ಕಲ್ ಮೇಳ, ಧರ್ಮಸ್ಥಳ ಮೇಳಗಳಲ್ಲಿ ಇವರ ಪ್ರಸಂಗಗಳು ಪ್ರದರ್ಶನಗೊಂಡಿವೆ. ಸುಂದರ ಸರಳ ಪದ್ಯಗಳನ್ನು ರಚಿಸಿದ್ದಾರೆ. ತುಳುವಿನಲ್ಲೂ ಪ್ರಸಂಗಗಳನ್ನು ರಚಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಂಗಾರವರ್ಮ ಕಾಳಗ, ಅಗಸ್ತ್ಯ ಮಹರ್ಷಿ, ಏಕಾದಶಿ ಮಹಾತ್ಮೆ, ಗುಂಡಬಾಳ ಕ್ಷೇತ್ರ ಮಹಾತ್ಮೆ, ತಪಸ್ವೀ ಮಹೇಂದ್ರ, ದಶಮಗ್ರಹ ವಿಜಯ (ವೀರ ರಾಣಿ ಅಪ್ರಮೇಯ), ಧರ್ಮ ವಿಜಯ (ಮನಮೆಚ್ಚಿದ ಮಡದಿ), ನಾಗಚಂದ್ರಿಕಾ (ಷಡ್ಜನ್ಮ ಮೋಕ್ಷ), ನಾಡ ಕೇದಗೆ, ನ್ಯಾಯ ಕೀರ್ತಿ ವಿಜಯ, ಪೆರ್ಡೂರು ಕ್ಷೇತ್ರ ಮಹಾತ್ಮೆ, ಬಗ್ಗು ಪಂಜುರ್ಲಿ ಪ್ರತಾಪ, ಬರ್ಬರೀಕ ಪ್ರತಾಪ, ಭಕ್ತ ಪ್ರಹ್ಲಾದ, ಭಸ್ಮಾಸುರ ಕಾಳಗ, ರುದ್ರಾಂತರ್ಗತ ಲಕ್ಷ್ಮೀನರಸಿಂಹ, ಶ್ರೀ ಕದ್ರಿ ಕ್ಷೇತ್ರ ಮಹಾತ್ಮೆ, ಶ್ರೀ ದೇವಿ ತ್ರಿಕರ್ಣೇಶ್ವರಿ ಮಹಾತ್ಮೆ, ಶ್ರೀ ಮಂತ್ರಾಲಯ ಮಹಾತ್ಮೆ, ಶ್ರೀ ವಾಣೀ ವಿಲಾಸ, ಶ್ರೀ ಹರಿ ಲೀಲಾರ್ಣವ, ಶ್ರೀವಿಶ್ವಕರ್ಮಮಹಾತ್ಮೆ, ಸಮುದ್ರ ಮಥನ, ಸುಂದೋಪಸುಂದರ ಕಾಳಗ, ಹಯಗ್ರೀವ ದೇವೋದ್ಭವ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀ ಶರ್ವಾಣಿ ಭವಾನಿ ಲೋಕಜನನೀ ಸದ್ಭಕ್ತ ರಕ್ಷಾಮಣೀ |
ದೇಶದ್ರೋಹಿಖಳಾರುಣಾಖ್ಯದಮನೇ ಶ್ರೀಭ್ರಾಮರೀ ಪಾವನೇ |
ಆಶ್ರಣ್ಣಾನ್ವಯ ಪೂಜಿತಾಂಘ್ರಿಯುಗಳೇ ಚಿದ್ರೂಪೆ ಸನ್ಮಂಗಲೇ |
ಲೇಸನ್ನೀಗು ಸದಾ ಕಟೀಲು ನಿಲಯೇ ದುರ್ಗೇ ನಮಸ್ತ್ರ್ಯಂಬಿಕೇ || ೧ || [೧]

**ದ್ವಿಪದಿ**
ವಾರಣಾಸ್ಯನ ನೆನೆದು ಶಾರದೆಯ ಸ್ಮರಿಸಿ |
ಮಾರವೈರಿಯ ಭಕ್ತಿಭಾವದಿಂ ನುತಿಸಿ || ೧ ||
ಆದಿಮೂರುತಿ ವಿಶ್ವಕರ್ಮದೇವನನು |
ಮೋದದಿಂ ಭಜಿಸುತ್ತ ಹರಿಗೆ ಎರಗುವೆನು || ೨ ||
ಶ್ರೀವಿಶ್ವಕರ್ಮಚರಿತೆಯನು ಪ್ರೇಮದಲಿ |
ಭಾವಶುದ್ಧದಿ ಬರೆದೆ ಯಕ್ಷಗಾನದಲಿ || ೩ ||
ಅರಿತವನು ನಾನಲ್ಲ ತಪ್ಪುಗಳ ತಿದ್ದಿ |
ಧರೆಯೊಳಗೆ ಮೆರೆಸುವುದು ಪ್ರಾಜ್ಞರಿದನೋದಿ || ೪ || [೫]

**ಶ್ರೀ - ತ್ರಿವುಡೆ**
ಜ್ಞಾನನಿಧಿಗಳು ಕೇಳಿ ಹಿಂದಕೆ |
ಆನೆಗೊಂದಿಯನಾಳಿಕೊಂಡಿರೆ |
ಕ್ಷೋಣಿಪತಿ ಸುವೃತಾಖ್ಯ ವಿಭವದೊ | ಳೇನನೆಂಬೆ || ೧ ||
ಕ್ಷೇಮರಾಜನ ತನಯನಾಗಿಹ |
ಆ ಮಹೀಪತಿ ತನ್ನ ಪ್ರಜೆಗಳ |
ಕ್ಷೇಮಚಿಂತನೆ ಮಾಡುತಿದ್ದನು | ಪ್ರೇಮದಿಂದ || ೨ ||
ಮೋಕ್ಷಪ್ರಾಪ್ತಿಗೆ ಮುಖ್ಯ ಜ್ಞಾನಾ |
ಪೇಕ್ಷೆಯೆಂಬುದನರಿತ ಧರಣಿಪ |
ಈಕ್ಷಿಸುತ ಕುಲಗುರುವ ನುಡಿದನು | ಆ ಕ್ಷಣದಲಿ || ೩|| [೮]

**ಬೇಗಡೆ - ಅಷ್ಟ**
ಲಾಲಿಪುದು ಗುಣಶೀಲ ಕುಲಗುರುವೆ | ತಿಳಿದವನು ನೋಡಲು |
ಫಾಲನೇತ್ರನ ತೆರದಿ ನೀ ಮೆರೆವೆ ||
ಜಾಲ ಮಾತುಗಳೆಂದು ಬಗೆಯದೆ |
ತಾಳಿ ಮಮತೆಯ ಶಿಷ್ಯನಲಿ ಮನ |
ದಾಳದೊಳು ಮೂಡಿರುವ ಸಂಶಯ |
ಜಾಲವನೆ ಪರಿಹರಿಸು ಜವದಲಿ || ೧ ||
ಗುರು ಸುಮಂತನು ನುಡಿದ ಜನಪನಿಗೆ | ಸಚ್ಚರಿತ ಪೇಳೈ |
ಕೊರತೆಯೇನಿದೆ ನಿನ್ನ ಈ ಬಗೆಗೆ ||
ಧರೆಯೊಳಗೆ ಎಣೆಗಾಣೆ ಧರ್ಮದಿ |
ಪುರವ ಪಾಲಿಸುತಿರುವೆ ನಿನ್ನಯ |
ಪರಿಯ ಕಂಡರೆ ದುಗುಡವೇನೆಂ |
ದರಿಯದಾದೆನು ಅರುಹು ಬೇಗದಿ || ೨ ||
ಭಕ್ತಿಯಿಂದೆರಗುತ್ತ ಪೇಳಿದನು | ಸುವೃತಾಖ್ಯ ಗುರುವಿಗೆ |
ಅರ್ತಿಯಿಂದಲಿ ತನ್ನ ದುಗುಡವನು ||
ಸತ್ಯದಾ ನುಡಿ ಪೃಥ್ವಿಯನು ಪೊರೆ |
ಯುತ್ತ ಬಂದಿಹೆ ಧರ್ಮಮಾರ್ಗದಿ |
ಮತ್ತೆ ಗಳಿಸಿದ ಸಂಪದವ ಉಪ |
ಯುಕ್ತ ಕ್ರಮದೊಳಿಂದು ಬಳಸಿಹೆ || ೩ ||

ಒಡನೆ ನುಡಿದ ಸುಮಂತ ಮುದದಿಂದ | ಧರಣಿಪನೆ ನಿನ್ನಯ |
ನಡೆಯನರಿತಿಹ ಗುರುವು ತಾನೆಂದ ||
ಪೊಡವಿಸುರರಿಗೆ ಬಿಡದೆ ದಾನವ |
ಕೊಡುತ ಧರ್ಮದಿ ನಡೆವ ನಿನ್ನಯ |
ಸಡಗರವ ನೀ ನುಡಿಯದಿದ್ದರು |
ದೃಢದಿ ತಿಳಿದಿಹೆಯೆನಲು ಪೇಳಿದ || ೪ ||
ಆದಡೆನ್ನಯ ಮನಕೆ ಶಾಂತಿಯದು | ದೊರೆತಿಲ್ಲ ಕುಲಗುರು |
ವೇದನೆಯನೆಂತೊರೆವೆ ನಿನಗಿಂದು ||
ಭೇದವೆಣಿಸಿಹನಲ್ಲ ಪ್ರಜೆಗಳ |
ನಾದರಿಸಿ ನಡೆದಿರುವೆನಾದೊಡೆ |
ಹಾದಿ ಕಾಣೆನು ಮುಕ್ತಿಮಾರ್ಗಕೆ |
ಬೋಧನೆಯ ಗೈವವರ ತಿಳುಹಿಸು || ೫ || [೧೩]

**ಭಾಮಿನಿ**

ಮುಕ್ತಿಮಾರ್ಗವ ಬೋಧಿಸುತ್ತಲಿ |
ಮತ್ತೆ ಜನನದ ಸ್ಥಿತಿಯ ತಪ್ಪಿಸಿ |
ನಿತ್ಯಸುಖಿಯನ್ನಾಗಿ ಮಾಳ್ಪರ ಕಾಣೆನೆಂದೆನುತ ||
ಭಕ್ತಿಭಾವದಿ ಎರಗಿದರೆ ಮುದ |
ವೆತ್ತು ನೃಪನನು ಮನ್ನಿಸುತ ಗುರು |
ಅರ್ತಿಯಿಂದಲಿ ನುಡಿದ ನಿನ್ನನು ಪಡೆದ ನಾ ಧನ್ಯ || ೧ || [೧೪]

**ಸಾಂಗತ್ಯ - ರೂಪಕ**

ಲಾಲಿಸಾದರೆ ನೃಪ | ತೋರುವೆ ನಿನಗಿಂದು |
ಮೇಲೆನಿಸುವ ಮುಕ್ತಿಪಥವ ||
ಲೀಲೆಯಿಂ ಬೋಧಿಸಿ | ಸಲಹುವ ಮಹಿಮನ |
ಜಾಲದ ನುಡಿಯಲ್ಲ ನಿಜವ || ೧ ||
ದೇವಗಂಗೆಯು ಪ್ರವ | ಹಿಸುವ ಕಾಶಿಯೊಳಿಹ |
ಭಾವಜಾರಿಯ ಅವತಾರಿ ||
ಕೋವಿದನನೆ ಕಾಳ | ಹಸ್ತಿ ಎನುತಲೆಲ್ಲ |
ಠೀವಿಯಿಂದಲೆ ಕರೆಯುವರು || ೨ ||
ಪರಮ ಸುಜ್ಞಾನವ | ನೊರೆವರೆ ನಿನಗಿಂದು |
ವರ ಕಾಳಹಸ್ತಿಯಲ್ಲದೆಯೆ ||
ಪರಿಕಿಸೆನನ್ಯರ | ಧರೆಯೊಳಗೆನುತಂದು |
ಗುರು ಸುಮಂತನು ಅರುಹಿದರೆ || ೩ || [೧೫]

**ವಾರ್ಧಕ**

ಭೂಲಲಾಮನು ಮುದವ ತಾಳಿ ನುಡಿದನು ಗುರುವೆ |
ಪೇಳಬೇಕಿಂದೆನಗೆ ಕಾಳಹಸ್ತಿಯ ಕತೆಯ |
ಫಾಲನೇತ್ರನ ದಿವ್ಯ ಅವತಾರವೆಂದೊರೆದೆ ಆ ದೇವನೇಕೆ ಧರೆಗೆ ||
ಲೀಲೆಯಿಂ ಬಂದಿರುವ ಕೈಲಾಸವನು ಬಿಟ್ಟು |
ಕೇಳಬೇಕೆಂಬ ಕಾತರವ ನೀ ತಣಿಸೆನಲು |
ನೀಲಕಂಠನ ಧ್ಯಾನಿಸುತ್ತ ಕುಲಗುರು ನುಡಿದ ಹಿಂದೆ ಸಮನಿಸಿದ ಪರಿಯ || ೧ || [೧೬]

**ಸೌರಾಷ್ಟ್ರ - ತ್ರಿವುಡೆ**

ಕುಂಭಿನೀಶ್ವರ ಲಾಲಿಸಾದರೆ |
ತ್ರ್ಯಂಬಕನು ಕೈಲಾಸದೊಳು ಬಲು |
ಸಂಭ್ರಮದಿ ಮೆರೆದಿರಲು ಭಕ್ತ ಕು | ಟುಂಬಿಯೆನಿಸಿ || ೧ ||

ಕರಿಮುಖನೆ ಮೊದಲಾದ ಪ್ರಮಥರು |
ನೆರೆದಿರಲು ಮುದದಿಂದ ಗಿರಿಜೆಯ |
ವೆರಸಿಕೊಂಡಾ ದೇವನಿದ್ದುದ | ಒರೆಯಲೆಂತು || ೨ ||
ಒಂದು ದಿನದಲಿ ಚಂದ್ರಮೌಳಿಯು |
ಚಂದದಿಂದಲಿ ನಿತ್ಯದಾಹ್ನಿಕ |
ಕೆಂದು ಪೊರಟಿರೆ ಬಳಿಕ ಕೊಳದಲಿ | ಮಿಂದು ಬರಲು || ೩ ||
ಸಿದ್ಧಪಡಿಸಿದಳಗಜೆ ಜಗದಿ ಪ್ರ |
ಸಿದ್ಧವೆನಿಸಿಹ ವಿನುತ ಭಸ್ಮವ |
ಶ್ರದ್ಧೆಯಿಂದಲಿ ಹರಗೆ ಪೂಸುವೆ | ನಿದ್ದು ನಾನೆ || ೪ ||
ಎಂಬ ನೇಮದಿ ನಡೆದು ಬರುತಿಹ |
ಅಂಬಿಕೆಯ ಮೊಗ ನೋಡಿ ನಗುತಲಿ |
ತ್ರ್ಯಂಬಕನು ಪೇಳಿದನು ಪ್ರೇಮದಿ | ಸಂಭ್ರಮದಲಿ || ೫ || [೨೩]

**ಸುರುಟಿ - ಏಕ**

ಹರಿಣಾಂಬಕಿ ಬಾರೆ | ಹೃದಯೇ |
ಶ್ವರಿ ಮೋಹನೆ ಚದುರೆ ||
ವರ ಭಸ್ಮವ ತಂ | ದಿರುವೆಯ ಪ್ರೇಮದಿ |
ಅರುಹೆನಗೆಂದನು | ಸರಸದಿ ಗಿರಿಜೆಗೆ || ೧ ||
ಮಣಿಯುತ ಗಿರಿಜಾತೆ | ನುಡಿದಳು |
ತ್ರಿಣಯಗೆ ಗುಣಭರಿತೆ ||
ಇನಿಯನೆ ತಂದಿಹೆ | ವರ ಭಸ್ಮವ ನೋ |
ಡೆನುತಲಿ ದೇವನ | ತನುವಿಗೆ ಪೂಸಲು || ೨ || [೨೫]

**ಕಂದ**

ಭಸ್ಮದಿ ಕಲ್ಲನು ಪರಿಕಿಸಿ |
ವಿಸ್ಮಯದಿ ಗಿರಿಜೆಯು ಶಂಕರಗೆ ಒರೆವೆಂದಾ ||
ಕಶ್ಮಲವ ಕೈಯಲಿ ಪಿಡಿದು |
ಭಸ್ಮಧರನಿಗೆ ಎರಗುತ್ತ ನುಡಿದಳು ಮುದದಿಂ || ೧ || [೨೬]

**ಮಧುಮಾಧವಿ - ಅಷ್ಟ**

ಪ್ರಾಣನಾಯಕ ದೇವ ಮೀನಾಂಕ ಹರನೆ |
ಸಾನುರಾಗದಿ ಕೇಳು ನಾನೆಂಬುದನ್ನ ||
ಏನೆಂಬೆ ಭಸ್ಮದಿ ಕಾಣಿಸಿಕೊಳಲು |
ಕ್ಷೋಣಿಯ ಕಲ್ಲೊಂದು ಚೋದ್ಯವಿಂದಿನೊಳು || ೧ ||
ನಿತ್ಯನೇಮವನೆಲ್ಲ ಚಿತ್ತಶುದ್ಧಿಯೊಳು |
ಅರ್ತಿಯೊಳ್ ಗೈದಿರೆ ಮತ್ತೆ ಇಂದಿನೊಳು ||
ಕೃತ್ತಿವಾಸನೆ ಪೇಳು ಸತ್ಯವ ತನಗೆ |
ಉತ್ತಮ ಭಸ್ಮದಿ ಕಲ್ಲಿನ ಬಗೆಗೆ || ೨ ||
ಮಡದಿಯ ನುಡಿ ಕೇಳಿ ಮೃಡನೆಂದ ನಗುತ |
ಬಿಡು ನಿನ್ನ ಮನದ ದುಗುಡವೆಂದನಾತ ||
ಕಡುಸಣ್ಣ ವಿಷಯಕೆ ಕೆಡಿಸದೆ ಮನವಾ |
ದೃಢದೊಳೆಸೆದು ಬಿಡು ಕರದೊಳಗಿರುವಾ || ೩ ||
ಕಲ್ಲನೆಂದೆನೆ ಕೇಳಿ ಫುಲ್ಲಲೋಚನೆಯು |
ವಲ್ಲಭಗೆರೆಗುತ್ತ ಸರ್ವಮಂಗಳೆಯು ||
ನಿಲ್ಲದೆಸೆಯೆ ಕಲ್ಲನಂದು ವಹಿಲದಿ |
ಸೊಲ್ಲಿಪೆನೇನನು ನಡೆದುದು ಜವದಿ || ೪ || [೩೦]

**ಕೇದಾರಗೌಳ - ಝಂಪೆ**
ಪುಟ್ಟಿದನು ಕಲ್ಲಿನಿಂದಾ | ಬಾಲಕನು |
ದಿಟ್ಟಿಸಲು ದೈತ್ಯನಂದ ||
ಕಟ್ಟಾಳುತನದಿ ಮೆರೆದಾ | ಮನದೊಳಗೆ |
ದಿಟ್ಟ ಯೋಚಿಸುತ ನುಡಿದಾ || ೧ ||
ಅರರೆ ಏನಾಶ್ಚರ್ಯವು | ನಾನಿಂತು |
ಮೆರೆಯುತಿಹ ಪರಿ ಚೋದ್ಯವು ||
ಧರೆಯೊಳಗೆ ಎಂತು ಬಂದೆ ಪುಟ್ಟಿರುವ |
ಪರಿಯೆಂತೊ ಅರಿಯದಾದೆ || ೨ ||
ಕಾಣೆನಾರನ್ನು ನಾನು | ಹಸಿವಿಂದ |
ಪ್ರಾಣ ಹೋಗುತಿದೆ ಇನ್ನು ||
ಏನ ನಾ ತಿಂಬೆನೆನುತಾ | ನುಡಿದಂಥ |
ದಾನವನು ತಿರುಗಿ ಬಳಿಕ || ೩ ||
ಖಂಡಪರಶುವ ಕಂಡನು | ದೈತ್ಯ ತಾ |
ಕಂಡು ಮುದ ತಾಳುತವನು ||
ರುಂಡಮಾಲೆಯ ಧರಿಸಿದ | ಶಿವನನ್ನೆ |
ಭಂಡ ತಿನ್ನುವರೆ ಬಗೆದ || ೪ ||
ಮೃಡನ ಸನಿಹಕೆ ಸಾರುತ | ಹರನನ್ನೆ |
ಹಿಡಿದು ತಿಂಬರೆ ಬಯಸುತ ||
ಕಡುದುಷ್ಟ ಬರುವ ಭರಕೆ |
ತಿಳಿದಂತು ಉಡುರಾಜಮೌಳಿ ಕ್ಷಣಕೆ || ೫ ||
ದಾನವನ ಹಸಿವು ಪೂರಾ | ಅಡಗುವರೆ |
ತಾನಿತ್ತ ವರದ ಸಾರ ||
ಏನೆಂಬೆ ಹಸಿವು ನೀಗೆ | ದಾನವನು |
ಜ್ಞಾನದಿಂದೆರಗಿ ಹರಗೆ || ೬ || [೩೬]

**ಕಾಂಬೋಧಿ - ಝಂಪೆ**
ಕೃತ್ತಿವಾಸನಿಗೆರಗಿ | ಭಕ್ತಿಯಲಿ ಬೆಸಗೊಂಡ |
ದೈತ್ಯನತಿ ಕಾತರದೊಳಿಂತು ||
ಪೆತ್ತವರ ನಾನರಿಯೆ | ಪುಟ್ಟಿರುವ ಬಗೆಯೆಂತೊ |
ಉತ್ತಮನೆ ತಿಳುಹಬೇಕೆನುತ || ೧ ||
ಮಣಿದ ದೈತ್ಯನನೆತ್ತಿ | ತ್ರಿಣಯನೆಂದನು ಮಗನೆ |
ಜನಿಸಿದೆಯ ಎನ್ನ ಕರುಣದಲಿ ||
ವಿನುತ ಭಸ್ಮದ ಕಲ್ಲಿನಿಂದ ಭಸ್ಮಾಸುರಂ |
ಎನುತ ಕರೆಯಲಿ ನಿನ್ನ ಜಗದಿ || ೨ ||
ಹರುಷಗೊಂಡೆನು ಜನಕ | ಅರುಹು ಎನ್ನನು ಇಂತು |
ಧರೆಯೊಳಗೆ ಸೃಷ್ಟಿಸಿದೆಯೇಕೆ ||
ಇರುವ ಕಾರ್ಯಗಳೇನು | ಮುಂದೆ ತನ್ನಿಂದಲದ |
ಒರೆಯಬೇಕೆಂದ ದೈತ್ಯನಿಗೆ || ೩ || [೩೯]

**ವಾರ್ಧಕ**
ಕೃತ್ತಿವಾಸನು ನುಡಿದ ಭಸ್ಮಾಸುರನೆ ಕೇಳು |
ನಿತ್ಯದಲಿ ಧರೆಯ ಸಂಚರಿಸಿ ಶೋಧಿಸುತೆನ್ನ |
ಭಕ್ತರೈದಲು ಮೃತಿಯನಲ್ಲಿಗೈದುತಲವರ ತನುಭಸ್ಮ ತಂದು ತನಗೆ ||
ಅರ್ತಿಯಿಂದೊಪ್ಪಿಸುವ ಕಜ್ಜ ನಿನ್ನದು ಇದಕೆ |
ಮತ್ತೆ ಎರಡೆನ್ನದೆಯೆ ನಡೆಯಬೇಕೆಂದೆನಲು |
ಚಿತ್ತದಲಿ ಬಲು ತೋಷವನ್ನಾಂತು ದಾನವನು ಹರಗೆರಗಿ ಪೊರಟನಂದು || ೧ || [೪೦]

**ಸುರುಟಿ - ಆದಿ**
ಧರಣಿಪ ಲಾಲಿಪುದು | ಮುಂದಿನ |
ಚರಿತೆಯ ನೀನೊಲಿದು ||
ದುರುಳನು ಮನದಲಿ | ಹರುಷವ ತಾಳುತ |
ಹರ ತಾನರುಹಿದ ತೆರದಲಿ ಪೊರಟನು || ೧ ||
ಸುತ್ತುತ ಧರಣಿಯನು | ತ್ರಿಣಯನ |
ಭಕ್ತರ ಮರಣವನು ||
ಅರ್ತಿಯೊಳರಸಲು | ನಿತ್ಯದಿ ದೊರಕಿತು |
ಉತ್ತಮ ಪುರುಷರ | ತನುವಿನ ಭಸ್ಮವು || ೨ || [೪೨]

**ಕೇದಾರಗೌಳ - ಅಷ್ಟ**
ಧರೆಯ ಸಂಚರಿಸುತ್ತ | ದುರುಳನು ಭಸ್ಮವ |
ತರುತಿದ್ದ ಮುದದಿಂದಲಿ ||
ಸರಿಯಲು ಕೆಲಕಾಲ | ಹರನ ಪ್ರೇರಣೆಯಂತೆ |
ಶಿರಕಡರಿದ ಮದದಿ || ೧ ||
ಮನದಿ ಯೋಚಿಸುತೆಂದ | ಮುನಿಗಳೊಪ್ಪಿಸೆ ಹವಿ |
ಸ್ಸನು ತಿಂದು ಜೀವಿಸುವ ||
ಅನಿಮಿಷರೆಮ್ಮಯ | ದನುಜ ಸಂತತಿಯನ್ನು |
ಹನನಗೈದಿಹರೆಂಬುದ || ೨ ||
ಮರೆತವನಲ್ಲವಾ | ದರೆ ದೈತ್ಯರೇಳಿಗೆ |
ಧರೆಯೊಳಗೆಂತಪ್ಪುದು ||
ಪರಿಯ ಕಾಣೆನು ಇದ | ಕಿರುವ ಉಪಾಯವೆ |
ವರವನೆ ಪಡೆಯುವುದು || ೩ || [೪೩]

**ವಾರ್ಧಕ**
ಸುರಪನನು ದೆಸೆಗೆಡಿಸಿ ಹರಿವಿರಿಂಚಿಯ ಗೆಲಿದು |
ಹರನ ಸಂಹರಿಸಿಯಾ ಗಿರಿಜೆಯನು ವರಿಸಿದಡೆ |
ಸರಿಯಾರು ತನಗೆನುತ ತಲೆದೂಗಿ ದಾನವನದೊಂದುಪಾಯವನು ಗೈದ ||
ವರ ಭಸ್ಮ ದೊರಕಲಿಲ್ಲವು ಎಂಬ ನೆಪದಿಂದ |
ವರ ಪಡೆವೆ ಶಿವನಿಂದ ಎಂದು ನಿಶ್ಚಯಗೈದು |
ಬರಿಕೈಯನಾಂತು ಬಂದರೆ ಕಂಡು ಶಂಕರನು ಬೆಸಗೊಂಡ ಕಾತರದಲಿ || ೧ || [೪೪]

**ಶಂಕರಾಭರಣ - ಅಷ್ಟ**
ಏನಯ್ಯ | ಭಕ್ತಾಗ್ರಣಿಯೆ ಭಸ್ಮಾಸುರ | ಏನಯ್ಯ || ಪ ||
ಏನಯ್ಯ ಭಕ್ತವರೇಣ್ಯ | ತಂದೆ |
ಯೇನು ಭಸ್ಮವ ಪೇಳು ಜಾಣ || ನಿನ್ನ |
ಮೌನ ಕಂಡರೆ ಅನುಮಾನ || ನೋಡೆ |
ಕ್ಷೋಣಿಯ ಜನರಿಂದ | ಹಾನಿಯೊದಗಿತೆ ನಿ |
ನ್ನಾನನ ಕಂದಿದೆ | ಕಾರಣವೇನಿದು || ೧ ||
ಕಂದುಗೊರಳನೆ ಲಾಲಿಪುದು | ಭಸ್ಮ |
ಕೆಂದು ಪೋದವನು ನಾನಿಂದು || ಆದ |
ಡಿಂದು ಆ ಭಸ್ಮ ದೊರೆಯದು || ಮುದ |
ದಿಂದ ಶೋಧಿಸಿದೆನು | ಈರೇಳು ಜಗವೆಲ್ಲ |
ತಂದೆ ಕಾಣದೆ ಪೋದೆ | ನಿನ್ನ ಭಕ್ತರ ಸಾವ || ೨ ||
ಬದುಕಲಾರೆನು ದೇವ ನಾನು | ನಿನ್ನ |
ಎದುರಿಲಿ ತನುವ ನೀಗುವೆನು || ಸೇವೆ |
ಗೊದಗದ ಪಾಪಿಯಾಗಿಹೆನು || ಕೊಡು ||
ವಿಧುಧರ ನೇಮವ | ಬಿಡುವೆ ಪ್ರಾಣವನೆಂದು |
ಮದಮುಖನೆರಗಲು | ಮುದದೊಳಗೆತ್ತಿದ || ೩ ||

ಬಿಡು ನಿನ್ನ ಶೋಕವ ಮಗನೆ | ನಿನ್ನ |
ದೃಢಭಕ್ತಿಗೊಲಿದಿಹೆ ನಾನೆ || ಮೆಚ್ಚಿ |
ಕೊಡುವೆ ಬೇಡಿದ ವರವನ್ನೆ || ಬೇಡೆ |
ತಡಮಾಡದೀವೆನು | ಅನುಮಾನವೇಕೆಂದು |
ಮೃಡನೊರೆದರೆ ಮುದ | ಪಡುತೆಂದ ದಾನವ || ೪ || [೫೦]

**ಭಾಮಿನಿ**
ಹರುಷವಾಂತೆನು ಜನಕ ನಿನ್ನಯ |
ಚರಣಕಮಲದಿ ಬೇಡುವೆನು ಈ |
ಎರಡು ಕರಗಳನಾರ ಶಿರದೊಳು ಇಡಲು ತತ್ಕ್ಷಣದಿ ||
ಉರಿದು ಭಸ್ಮವನಾಂತು ಪೋಗುವ |
ವರವ ಕೊಡುಯೆಂದೆನುತ ಮಣಿದರೆ |
ಕರುಣದಿಂದಲಿ ವರವನಿತ್ತಾ ಖಳನ ಕಳುಹಿಸಿದ || ೧ || [೫೧]

**ಸೌರಾಷ್ಟ್ರ - ತ್ರಿವುಡೆ**
ವಿಧುಧರನ ವರವನ್ನು ಪಡೆದಾ |
ಮದಮುಖನು ಮನದೊಳಗೆ ಹಿಗ್ಗುತ |
ಮುದದಿ ಧರೆಯನು ಸುತ್ತಿ ತಿರುಗಿದ | ಮದದೊಳಂದು || ೧ ||
ಉರಿಯ ಹಸ್ತವನಿರಿಸಿ ಋಷಿಗಳ |
ತರಿದು ನೃಪರನೆ ಗೆಲಿದು ಪೊಡವಿಯ |
ನಿರದೆ ವಶಕರಿಸುತ್ತ ಮೆರೆದನು | ದುರುಳನಾಗಿ || ೨ ||
ದೈತ್ಯಪಡೆಯನುವೆರಸುತೊಂದಿನ |
ಧೂರ್ತ ನಾಕವ ಮುತ್ತಿದಡೆ ತಿಳಿ |
ಯುತ್ತ ಚಾರಕರಂದು ಸುರಪಗೆ | ಬಿತ್ತರಿಸಲು || ೩ || [೫೪]

**ಮುಖಾರಿ - ಆದಿ**
ಸುರನಾಥ ಲಾಲಿಸೈ ಬಿನ್ನಪವಾ | ನಾವೆಂಬ ನುಡಿಯ |
ದುರುಳ ದಾನವರು ಮುತ್ತಿ ಪುರವಾ ||
ನೆರಹಿಸಿ ಸೇನೆಯ | ಭರದಲಿ ದೈತ್ಯರು |
ಅರುಹಲದೇನದ | ಮುತ್ತಲು ನಾಕವ |
ಅರಿಯುತಲಿದ ಬಲು | ಬೆದರುತ ಮನದಲಿ |
ಅರುಹಲು ನಿನ್ನಲಿ | ಬಂದೆ ಪರಾಕೆ || ೧ ||
ದೈತ್ಯೇಶನಾದ ಭಸ್ಮಾಸುರನು | ಕೂಡುತ್ತ ಖಳ |
ಮೊತ್ತವ ಭರದೊಳೈತಂದಿಹನು ||
ಮುತ್ತುತ ನಾಕದ | ಭೃತ್ಯರ ಭಂಗಿಸಿ |
ಮತ್ತಾ ದಾನವ | ನಿತ್ತಿರೆ ದ್ವಾರದಿ ||
ವೃತ್ರಾರಿಯೆ ಇದ | ಚಿತ್ತದಿ ಯೋಚಿಸಿ |
ದೈತ್ಯರ ಬಾಧೆಯ | ಹತ್ತಿಕ್ಕುವುದು || ೨ || [೫೬]

**ಸೌರಾಷ್ಟ್ರ - ತ್ರಿವುಡೆ**
ಚಾರಕರ ನುಡಿಕೇಳಿ ಸುರಪತಿ |
ಭೂರಿ ರೋಷವನಾಂತು ಸುಮನಸ |
ವೀರರನು ನೆರಹಿಸುತ ಗಜವ | ನ್ನೇರಿ ಬಂದ || ೧ || [೫೭]

**ಭೈರವಿ - ಅಷ್ಟ**
ಯಾರು ನೀನೆಲವೊ ದೈತ್ಯ | ಬಂದಿರುವಂಥ |
ಕಾರಣವೇನು ಮತ್ತಾ ||
ಕ್ರೂರ ರಕ್ಕಸ ಪರಿ | ವಾರವ ಕೂಡುತ |
ಈ ರೀತಿಯಲಿ ಬಲು || ೧ ||

ದನುಜೇಶ ಭಸ್ಮಾಸುರ | ನಾನಿಹೆ ನೋಡೆ |
ತ್ರಿಣಯನಿತ್ತಿರಲು ವರ ||
ಅನಿಮಿಷರಾಗಿಹ | ನಿಮ್ಮನು ಕೊಲಬಂದೆ |
ರಣದಲಿ ಸುರಪಾಲನೆ || ೨ ||
ಮರುಳನೆ ನಿನ್ನಂದ | ದೈತ್ಯರು ಬರೆ |
ತರಿದೆವು ನೋಡಲದ ||
ಮರೆತೆಯ ಹಿತದಿಂದ | ತೆರಳುವುದೊಳ್ಳಿತು |
ಧುರ ಸಾಗದೆನ್ನೊಳೆಂದ || ೩ ||
ಉರಿಹಸ್ತದಿಂದ ನಿಮ್ಮ | ದಹಿಸಲು ನಾನು |
ಧುರ ಕೊಡುವಂಥ ಹಮ್ಮ ||
ಸುರಪ ನೀನಾಡದೆ | ಧುರಕೊಡಗಲು ಅದ |
ಪರಿಕಿಪೆನೆನುತೆಂದನು || ೪ ||
ಧಿರುರೆ ಕಾಂಬೆನು ಎನುತ | ಸುರಪಾಲ |
ದುರುಳಗೆ ಶರ ಬಿಡುತ ||
ಧುರ ಕೊಡಲಂದಿಲಿ | ಉರಿಹಸ್ತ ಇಡೆ ಬಂದ |
ಪರಿಕಂಡು ಓಡಿದನು || ೫ || [೬೨]

**ಮಾರವಿ - ಏಕ**
ಸುರಪನ ಗೆಲಿದಾ | ದಾನವ ನಾಕದ |
ಹರಿಪೀಠವನೇರಿ ||
ಮೆರೆದನು ವಿಭವದಿ | ತ್ರೈಲೋಕವ ವಶ |
ಕರಿಸಿದ ಗರ್ವದಲಿ || ೧ ||
ಸತ್ಯಲೋಕದ ವಿ | ಧಾತನ ಪರಿಕಿಸೆ |
ಧೂರ್ತನು ಬಗೆದಂದು ||
ಅರ್ತಿಯೊಳೈತರೆ | ಅರಿತಾ ವಿಧಿ ಉರಿ |
ಹಸ್ತಕೆ ಬೆದರುತಲಿ || ೨ ||
ನಿಲದೋಡಲು ಇದ | ಕಾಣುತ ಖಳ ತಾ |
ನಲವಿಲಿ ನಗುತಂದು ||
ಜಲಜಭವನ ನಾ | ಗೆಲಿದೆನು ಎನ್ನುತ |
ಸಲೆ ತೋಷದೊಳಂದು || ೩ ||
ಕಳ್ಳಕಪಟಿ ಸಿರಿ | ವಲ್ಲಭನನು ನಾ |
ಕೊಲ್ಲುವೆನೆನುತಂದು ||
ನಿಲ್ಲದೆ ಬಂದಾ | ಕ್ಷೀರಾಬ್ಧಿಯ ಕಡೆ |
ಸೊಲ್ಲಿಪೆನೇನದನು || ೪ ||
ದನುಜೇಶನ ಬರ | ವರಿತಾ ಅಚ್ಯುತ |
ಧುರ ಸಾಗದು ತನಗೆ ||
ತ್ರಿಣಯನ ವರದಿಂ | ದೆನ್ನುತ ಯೋಚಿಸಿ |
ಅಣುರೂಪದೊಳಿರಲು || ೫ ||
ದೈತ್ಯಾರಿಯು ಉರಿ | ಹಸ್ತಕೆ ಬೆದರಲು |
ಧೂರ್ತನ ಸಂತಸವ ||
ಬಿತ್ತರಿಸಲದೇ | ನಾಕ್ಷಣ ಯೋಚಿಸಿ |
ದೈತ್ಯನು ಮನದೊಳಗೆ || ೬ ||
ಮೃಗಧರನನು ಉರಿ | ಹಸ್ತದಿ ದಹಿಸುತ |
ಅಗಜೆಯ ವರಿಸುವೆನು ||
ಜಗ ಮೂರನು ತಾ | ನಾಳುವೆ ಎನ್ನುವ |
ಮಿಗೆ ತೋಷದಿ ತಾನು || ೭ ||

ಹರನೆಡೆಗೈತರೆ | ದುರುಳನ ಕಾಣುತ |
ಹರುಷದಿ ಉಪಚರಿಸೆ ||
ಒರೆಯಲದೇನದ | ವರವಿತ್ತವನಿಗೆ |
ಜರೆದನು ಈ ತೆರದಿ || ೮ || [೭೦]

**ಶಂಕರಾಭರಣ - ಮಟ್ಟೆ**
ಕೃತ್ತಿವಾಸ ಕೇಳು ತನಗೆ |
ಇತ್ತೆ ಉರಿಯ ಹಸ್ತವಿದರ |
ಸತ್ವ ಕಾಂಬೆ ಬಾರೆನುತ್ತ | ಧೂರ್ತ ಜರೆಯಲು || ೧ ||
ಏನನೆಂಬೆ ದೈತ್ಯಶ್ರೇಷ್ಠ |
ಚೂಣಿಗೊದಗಿ ಬಂದೆಯೇನು |
ನಾನು ಕೊಟ್ಟ ವರಕೆ ಫಲವ | ನೀಡ ಬಂದೆಯ || ೨ ||
ಬಿಡುವುದುಂಟೆ ದೇವನೆನುತ |
ಪೊಡವಿಯೊಳಗೆ ಮೆರೆಸಿಕೊಂಡ |
ಮೃಡನೆ ನಿನ್ನನೀಗ ದಹಿಸಿ | ಬಿಡುವೆ ಕ್ಷಣದಲಿ || ೩ ||
ಹಿಂದೆ ನಾನು ಯೋಚಿಸದೆಯೆ |
ಕಂದನೆನುತ ವರವನಿತ್ತೆ |
ಚಂದವಾಯ್ತು ಎನ್ನ ದಹಿಸ | ಬಂದುದೇತಕೆ || ೪ ||
ಸೃಷ್ಟಿಗೈದ ದೇವ ಕೇಳು |
ಗುಟ್ಟುಮಾತ ದಹಿಸಿ ನಿನ್ನ |
ಪಟ್ಟದರಸಿಯನ್ನು ವರಿಸಿ | ಕೊಂಬೆನೆನ್ನುತ || ೫ ||
ಬಂದಿತೀಗ ಕಾಲ ನಿನಗೆ |
ಮಂದಮತಿಯೆ ನಿನ್ನ ಬಿಡೆನು |
ಎಂದ ಹರಗೆ ಇಡಲು ಬಂದ | ಉರಿಯ ಹಸ್ತವ || ೬ ||
ಚಂದ್ರಮೌಳಿ ಬೆದರಿ ಮನದಿ |
ಚಂದದಿಂದಲೋಡೆ ಬಿಡದೆ |
ಮಂದಮತಿಯು ಪಿಡಿದ ಬೆನ್ನ | ಕಂದುಗೊರಳನ || ೭ || [೭೭]

**ವಾರ್ಧಕ**
ಪೃಥ್ವಿಪತಿ ಲಾಲಿಪುದು ಧೂರ್ತನೀ ಪರಿಯಿಂದ |
ಕೃತ್ತಿವಾಸನ ಬೆನ್ನ ಬಿಡದಿರಲು ಕಾಣುತ್ತ |
ಚಿತ್ತಜಾರಿಯು ಬೆದರಿ ಉರಿಹಸ್ತವನ್ನಿಡುವ ಏನುಗತಿ ತನಗೆನ್ನುತ ||
ದೈತ್ಯಾರಿ ಮಾಧವನ ಹೊರತು ಅನ್ಯರ ಕಾಣೆ |
ಧೂರ್ತನನು ವಧಿಸೆಯೆಂದೆನುತಲಾ ಗಿರಿಜೇಶ |
ಭಕ್ತಿಯಿಂ ಶ್ರೀಹರಿಯ ಧ್ಯಾನಿಸುತ ವಟವೃಕ್ಷ ರೂಪ ತಳೆಯುತ ನಿಂದನು || ೧ || [೭೮]

**ಕೇದಾರಗೌಳ - ಅಷ್ಟ**
ಉರಿಹಸ್ತದಿಂದ ಶಂಕರನ | ದಹಿಪೆನೆಂದು |
ದುರುಳನು ಬರುತಿರಲು ||
ಅರಿತು ದಾನವವೈರಿ | ಖಳನ ಸಂಹರಿಸಲು |
ಧರಿಸಿದ ಸ್ತ್ರೀರೂಪವ || ೧ ||
ಮೂರು ಲೋಕದ ಚೆಲು | ವನು ಹೀರಿಕೊಂಡಂತೆ |
ನಾರಿರೂಪವ ತಳೆದು ||
ಶ್ರೀರಮಣನು ನರ್ತಿ | ಸಲು ಕಂಡು ಮೋಹದಿ |
ಧಾರಿಣಿ ಬೆರಗಾಯಿತು || ೨ ||
ಕರೆಯೆ ಮೋಹಿನಿಯೆಂಬ | ಪೆಸರಿಂದ ಸುರರೆಲ್ಲ |
ಹರಿಣಾಕ್ಷಿ ನಡೆತಂದಳು ||
ಹರನಿದ್ದ ವಟವೃಕ್ಷ | ದಡಿಯೊಳು ನರ್ತಿಸೆ |
ದುರುಳ ಭಸ್ಮಾಸುರನು || ೩ ||

ಮೃಡನ ಬೆಂಬತ್ತುತ | ಬರುತಿರೆ ವಟವೃಕ್ಷ |
ದಡಿಯೊಳು ಮೋಹಿನಿಯು ||
ಬೆಡಗು ಬಿನ್ನಾಣದಿ | ನರ್ತಿಸೆ ಈಕ್ಷಿಸಿ |
ಸಡಗರಗೊಳುತೆಂದನು || ೪ || [೮೨]

**ಯಮುನಾಕಲ್ಯಾಣಿ - ಅಷ್ಟ**
ಯಾರಿವಳಮಮ ವೈಯಾರಿ | ಸ್ಮರ |
ನಾರಿಯ ತೆರ ಶೋಭಿಸುವ ಹೊಂತಕಾರಿ |
ವಾರಿಜನೇತ್ರೆ ಕೋಮಲೆಯು | ಇಂದು |
ಓರೆನೋಟದೊಳೆನ್ನ ನೋಡುವ ಪರಿಯು || ೧ ||
ಮಂದಹಾಸವ ಬೀರುತಿಹಳು | ಎನ್ನ |
ಬಂಧಿಸಿ ಸೆಳೆವಳು ಪ್ರೇಮಪಾಶದೊಳು ||
ಸುಂದರಿ ಎನ್ನನೊಲಿವಳೊ | ಇದ |
ಚೆಂದದಿ ಕಾಂಬೆನೆನುತ ಪ್ರೇಮದೊಳು || ೩ ||
ಯಾರಮ್ಮ ನೀನು ಶೃಂಗಾರೆ | ವೈ |
ಯಾರವ ಬೀರಿ ನರ್ತನಗೈವ ಚದುರೆ ||
ಮೂರು ಲೋಕವನೆ ಮೋಹಿಸುವೆ | ಕೃಪೆ |
ದೋರಿ ಪೇಳೆನಗೆ ನೀನಾರೆಂಬುದರಿವೆ || ೩ ||
ಲಾಲಿಸಾದರೆ ದೈತ್ಯತಿಲಕ | ನಿಜ |
ಪೇಳುವೆ ನಿನ್ನಲಿ ಮೋಹಿನಿ ಎನುತ ||
ಲೀಲೆಯಿಂದಲಿ ಕರೆಯುವರು | ನೋಡೆ |
ಕಾಲವ ಕಳೆವೆನು ನಾಟ್ಯಗಾನದೊಳು || ೪ || [೮೬]

**ಸಾಂಗತ್ಯ - ರೂಪಕ**
ಬಲು ತೋಷವಾಂತೆ ನಾ | ನಳಿನನೇತ್ರೆಯೆ ನಿನ್ನ |
ಚೆಲುವಿಗೆ ಮನವ ಸೋತಿಹೆನು ||
ಒಲಿದೆನ್ನ ವರಿಸಿಕೊ | ಳ್ಳುತ ಮುದ ಪಡೆಯೆಂದು |
ಖಳನೊರೆದುದ ಕೇಳಿ ನಗುತ || ೧ ||
ಕಪಟದ ನಾರಿ ಪೇ | ಳಿದಳು ನಾಟ್ಯದಿ ನಾನು |
ನಿಪುಣೆಯಾಗಿರಲು ಎನ್ನಂತೆ ||
ಚಪಲದಿ ಕುಣಿದು ತೋ | ರಿಪನನ್ನೆ ವರಿಸುವ |
ಶಪಥಗೈದಿರುವೆ ನಾ ಮೊದಲು || ೨ ||
ಹರಿಣಾಕ್ಷಿ ಕೇಳು ನಾ | ನರಿತಿಹೆ ನಾಟ್ಯವ |
ನೆರವೇರಿಸುತ ನಿನ್ನ ಶಪಥ ||
ವರಿಸಿಕೊಂಬೆನು ಎನು | ತೊರೆದರೆ ಮೋಹಿನಿ |
ದುರುಳಗೆಂದಳು ಕೇಳು ಮಾತ || ೩ ||
ಬಾಯಿಮಾತಿಗೆ ಮರುಳಾಗುವಳಲ್ಲ ಉ |
ಪಾಯದಿ ವರಿಪೆನೆಂದೆನುವ ||
ಕಾಯಕ ಸಾಗದು | ಕರತಟ್ಟಿ ನಂಬುಗೆ |
ಈಯ ಬೇಕೆಂದು ಕೇಳಿದರೆ || ೪ ||
ವೃತ್ತಕುಚೆಯೆ ನಿನ್ನ | ನರ್ತನದಂತೆ ನಾ |
ನರ್ತಿಸಿ ವರಿಸುವೆ ದಿಟವು ||
ಮತ್ತೆ ಯೋಚನೆ ಇಲ್ಲ | ಎನುತ ಭಸ್ಮಾಸುರ |
ಇತ್ತ ಕರತಟ್ಟಿ ನಂಬುಗೆಯ || ೫ ||
ಭೂರಮಣನೆ ಕೇಳು | ಬಳಿಕ ಶ್ರೀರಮಣನು |
ಧಾರುಣಿ ಬೆರಗಾಗುವಂತೆ ||
ಚಾರು ನರ್ತನಗೈಯ | ಲಾರಂಭಿಸಲು ಕಂಡು |
ಕ್ರೂರದೈತ್ಯನು ಸಂತಸದಲಿ || ೬ || [೯೨]

**ವಾರ್ಧಕ**
ಕ್ಷೋಣಿಪತಿ ಲಾಲಿಪುದು ಮೋಹಿನಿಯು ನರ್ತಿಸಲು |
ಮಾನಿನಿಯ ಮೋಹಪಾಶಕೆ ಸಿಲುಕಿ ಬಿದ್ದಿರುವ |
ದಾನವನು ಮೆಯ್ಮರೆತು ನರ್ತಿಸಿದನದರಂತೆ ಏನೆಂಬೆನದರ ಸೊಬಗ ||
ಮೀನಾಂಕಪಿತನಂದು ವೇಗದಿಂ ತಿರುಗುತ್ತೆ |
ತಾನಿಡಲು ಎರಡು ಕರಗಳ ತನ್ನ ಶಿರದ ಮೇ |
ಲೇನೆಂಬೆನಾ ಸಮಯ ಅದರಂತೆ ನರ್ತಿಸಿದ ದಾನವನು ದಹಿಸಿಪೋದ || ೧ || [೯೩]

**ಭಾಮಿನಿ**
ದುರುಳ ಭಸ್ಮಾಸುರನು ಮಡಿಯಲು |
ಪರಶಿವನು ವಟವೃಕ್ಷ ರೂಪವ |
ತೊರೆದು ಕಂಡರೆ ಮೋಹಿನಿಯ ಮೋಹಕದ ಸೊಬಗಿಂಗೆ ||
ಮರುಳುಪಡುತ್ತೈದಿದರೆ ಸನಿಹಕೆ |
ತರುಣಿ ಲಜ್ಜೆಯನಾಂತು ಹಿಂದಕೆ |
ಸರಿಯೆ ಬಿಡದಾ ಕಾಮಹರನಾಲಿಂಗಿಸಲು ಪೊರಟ || ೧ || [೯೪]

**ಸುರುಟಿ - ಏಕ**
ಹುಡುಗಾಟವೆ ದೇವ | ಶಂಕರ |
ಹಿಡಿತದೊಳಿಡು ಮನವ ||
ಕುಡುವಿಲ್ಲನ ವೈ | ರಿಯು ನೀನಾಗಿರೆ |
ನುಡಿಯಲದೇನೀ | ಕಾಮವು ತರವೆ || ೧ ||
ಚಂದಿರಮುಖಿ ಕೇಳೆ | ಕೋಮಲೆ |
ಸುಂದರಾಂಗಿ ಬಾಲೆ ||
ಕಂದರ್ಪನು ಆ | ಸೇಡನು ತೀರಿಪ |
ನಿಂದಿಲಿ ಸಹಿಸೆನು | ಕೂಡಲು ಬಾ ಬಾ || ೨ ||
ಸ್ಮರವೈರಿಯ ನುಡಿಗೆ | ಮೋಹಿನಿ |
ಬೆರಗಾಗುತ ಕಡೆಗೆ ||
ಅರಿತಳು ನೀತಿಯ | ನೊರೆದರೆ ಕೇಳನು |
ಮರುಳಾಗಿಹ ಶಂ | ಕರನೆನುತಾಕ್ಷಣ || ೩ || [೯೮]

**ಸೌರಾಷ್ಟ್ರ - ತ್ರಿವುಡೆ**
ಮೃಗಧರನ ಕಾಮವನು ಕಂಡಾ |
ನಗಧರನು ತನುನೀಡಿ ಬೆರೆತರೆ |
ಅಗಜೆ ತಿಳಿದೈದುತ್ತ ನುಡಿದಳು | ಕುಪಿತದಿಂದ || ೧ ||
ನಾರಿವೇಷವನಾಂತು ಬಂದಿಹ |
ಶ್ರೀರಮಣನಲಿ ಮೋಹವೇನಿದು |
ಮಾರವೈರಿಯದೆಂಬ ಬಿರುದಿಗೆ | ಊನ ತಂದೆ || ೨ ||
ಮಾನವರ ತೆರನಾಯ್ತು ತಪ್ಪಿಗೆ |
ನೀನು ನರರೂಪವನು ತಾಳುತ |
ಕ್ಷೋಣಿಯಲಿ ಮುನಿವೃತ್ತಿ ಮಾಡೆಂ | ದೇಣನಯನೆ || ೩ ||
ಶಪಿಸಿದರೆ ಕೇಳುತ್ತ ಮೃಗಧರ |
ಕೃಪೆಯೊಳಿದ ಸ್ವೀಕರಿಸಿದನು ಕೇಳ್ |
ನೃಪತಿಲಕ ಸುವೃತಾಖ್ಯ ಎನ್ನುತ | ಗುರು ಸುಮಂತ || ೪ || [೧೦೧]

**ಭಾಮಿನಿ**
ಫಾಲನೇತ್ರನೆ ಈಗ ಧರೆಯೊಳು |
ಕಾಳಹಸ್ತಿಯ ರೂಪ ತಳೆದಿಹ |
ಪೇಳಲೇನವನಲ್ಲದನ್ಯರ ಕಾಣೆ ಧರೆಯೊಳಗೆ ||
ಭೂಲಲಾಮನೆ ನಿನಗೆ ಜ್ಞಾನವ |
ಲೀಲೆಯಿಂ ಬೋಧಿಸುತ ಸಲಹುವ |
ವೇಳೆ ಕಳೆಯದೆ ತೆರಳು ಕಾಶಿಗೆಯೆನಲು ಸಂತಸದಿ || ೧ || [೧೦೨]

**ಕಾಂಬೋಧಿ - ಝಂಪೆ**
ಗುರುಸುಮಂತನ ನುಡಿಗೆ | ಹರುಷವ ತಳೆಯುತ್ತ |
ಧರಣಿಪತಿ ತನ್ನ ರಾಜ್ಯವನು ||
ತರಳರಿಗೆ ಕೊಟ್ಟು ನೀ | ತಿಯ ಪೇಳಿ ಪೊರವಂಟಾ |
ವರ ಕಾಶಿಕ್ಷೇತ್ರದೆಡೆಗಾಗಿ || ೧ ||
ಪೃಥ್ವಿಯೊಳು ಮೆರೆಯುತಿಹ | ಉತ್ತಮದ ಕಾಶಿಯೊಳು |
ಕೃತ್ತಿವಾಸನ ವಂಶಜಾತ ||
ಚಿತ್ತವಿಸಿಯಾ ಕಾಳ | ಹಸ್ತಿಮುನಿವರನು ನಿಜ |
ಭಕ್ತರನು ಸಲಹಿಕೊಂಡಿರ್ದ || ೨ ||
ಹರುಷದಿಂದಲಿ ಶಿಷ್ಯ | ಜನಸಹಿತಲಂದು ನೆರೆ |
ದಿರಲು ಉದ್ಯಾನಮಂಟಪದಿ ||
ವರ ಮುನೀಂದ್ರನ ಬಳಿಗೆ | ಧರಣಿಪತಿಯೈತಂದು |
ಪರಿಕಿಸಿದ ಮುನಿಯ ಮುದದಿಂದ || ೩ ||
ಪದ್ಮಾಸನದಿ ಕುಳಿತ | ಮುನಿಯ ಕೋಮಲಪಾದ |
ಪದ್ಮಗಳಿಗೆರಗಿ ಬೆಸಗೊಂಡ ||
ರುದ್ರದೇವನ ಅಂಶ | ಜಾತ ಕೃಪೆಯಿರಿಸಿ ಪೊರೆ |
ಶ್ರದ್ಧೆಯಿಂ ಬಂದೆ ನಿನ್ನೆಡೆಗೆ || ೪ ||
ಚರಣದೊಳು ಮಣಿದಿರುವ | ಧರಣಿಪನ ಪಿಡಿದೆತ್ತಿ |
ಯೊರೆದ ಮುನಿವರನು ಕರುಣದಲಿ ||
ಅರುಹು ನೀನಾರು ಬಂ | ದಿರುವೆಯೇತಕೆ ಇಲ್ಲಿ |
ಅರಿಯದಾದೆನು ತಿಳುಹು ತನಗೆ || ೫ || [೧೦೬]

**ಬೇಹಾಗ್ - ಆದಿ**
ನರರೂಪವ ಧರಿಸಿದ ಹರನೆ | ನಿಜ |
ಶರಣರ ಪೊರೆವ ಕೃಪಾಕರನೆ || ಪ ||
ಅರಿತವ ನೀನಾ | ಗಿರುತಿರೆ ನಿನ್ನಲಿ |
ಒರೆಯಲ್ಕೇನಿದೆ ಜ್ಞಾನನಿಧಿ ||
ಕರುಣಾಕರ ತವ | ಚರಣಕೆ ಮಣಿದೆನು |
ಪೊರೆಯುವುದೆನ್ನ ದಯಾಶರಧಿ || ೧ ||
ಕ್ಷೋಣಿಯೊಳೆಸೆಯುವ | ಆನೆಗೊಂದಿಯ ಪುರ |
ಕಾಣಲು ಪೊರೆವವ ನಾನಂದು ||
ಕಾಣದೆ ಮುಕ್ತಿಯ | ತಾಣಕೆ ಹಾದಿಯ |
ನಾನೈದಿಹೆ ನಿನ್ನೆಡೆಗಿಂದು || ೨ ||
ಪರಿಕಿಸೆ ರಾಜ್ಯವ | ತರಳರ ಮಿತ್ರರ |
ಕರಪಿಡಿದರಸಿಯ ತೊರೆದಿರುವೆ ||
ಪರಮ ಸುಜ್ಞಾನವ | ಕರುಣಿಸಿ ಭವ ಸಾ |
ಗರವನು ದಾಂಟಿಸು ನೀ ಗುರುವೆ || ೩ ||
ಕ್ಷೋಣಿಪನಿಂತೆನೆ | ಮೌನಿಪ ನುಡಿದನು |
ಜ್ಞಾನವೆ ಮುಕ್ತಿಗೆ ಸಾಧನವು ||
ಕಾಣುವ ಮಾಯಾ | ಪಾಶಕೆ ಸಿಲುಕದೆ |
ನೀನೈದಿದ ಪರಿ ಸಂತಸವು || ೪ ||

ಪೃಥ್ವಿಪಗೆಂದ ಮ | ಹಾತ್ಮನು ಕೃಪೆಯಲಿ |
ಚಿತ್ತವಿಪುದು ಸುಚರಿತ ನೃಪತಿ ||
ಉತ್ತಮ ದೀಕ್ಷೆಯನಿತ್ತೆನು ನಿನಗೀ |
ಹೊತ್ತಿಲಿ ಪಡೆ ಇರಿಸುತ ಭಕ್ತಿ || ೫ ||
ಧರಣಿಪ ದೀಕ್ಷೆಯ | ಪಡೆಯುತ ಹರುಷದಿ |
ವರಮುನಿಪಗೆ ಎರಗುತಲೆಂದ ||
ನರರೂಪವ ಧರಿಸಿರುವ ಹರನೆ ಪರಿ |
ಹರಿಸೈ ಸಂಶಯ ಒರೆವೆನದ || ೬ || [೧೧೩]

**ವಾರ್ಧಕ**

ಭೂರಿ ಮೇದಿನಿಯನಿದನಾರು ಸೃಜಿಸಿದರು ಮೇ |
ಣಾರಿಂದ ಹರಿಬ್ರಹ್ಮ ದೇವತೆಗಳುದಿಸಿದರು |
ಆರಿದಕೆ ಆಧಾರಕರ್ತನೆಂದರುಹು ಸುವಿಚಾರಪೂರ್ಣನೆ ದಯದಲಿ ||
ತೋರುತಿಹ ಸೃಷ್ಟಿ ಸ್ಥಿತಿ ಲಯಗಳನು ಎಸಗುತ್ತೆ |
ಧಾರುಣಿಯ ಪೊರೆಯುತಿಹ ದೇವನಾರೆಂದರುಹಿ |
ಈ ರಸೆಯ ಬಂಧನವ ಬಿಡಿಸೆಂದು ಎರಗಿದರೆ ಕಾಳಹಸ್ತಿಯು ಪ್ರೇಮದಿ || [೧೧೪]

**ಬೇಗಡೆ - ತ್ರಿವುಡೆ**

ಪೃಥ್ವಿಪತಿ ಲಾಲಿಪುದು ನೀ ದಯದಿ | ಜ್ಞಾನವನು ಪಡೆದವ |
ಮುಕ್ತಿಪದಕೈದುವನು ನಿಶ್ಚಯದಿ ||
ಉತ್ತಮದ ಋಗ್ವೇದದಂತ್ಯವು |
ಬಿತ್ತರಿಸುತಿದೆ ಧರಣಿ ಮೂರಕೆ |
ನಿಶ್ಚಯದೊಳಾ ವಿಶ್ವಕರ್ಮನ |
ತತ್ವಸಾರವೆ ಜ್ಞಾನದಾಗರ || ೧ ||
ಮಾತು ಮನಸಿಗೆ ನಿಲುಕದಾ ಧರ್ಮ | ನಿರ್ಗುಣ ಪ್ರಣವ ಪರಂ |
ಜ್ಯೋತಿ ಸಚ್ಚಿದಾನಂದ ಪರಬ್ರಹ್ಮ ||
ಈತೆರದೊಳಾ ನಿರ್ಗುಣದ ಮಹಿ |
ಮಾತಿಶಯವನು ಪಂಚವಿಧದೊಳು |
ಭೂತಳದಿ ಕೊಂಡಾಡುತಿರುವರು |
ಶಾಸ್ತ್ರಕೋವಿದರಾದ ಪ್ರಾಜ್ಞರು || ೨ ||
ಆದಿ ಮಧ್ಯಾಂತ್ಯಗಳು ಇದಕಿಲ್ಲ | ನಿರ್ಗುಣವ ನೋಡಲು |
ಮೇದಿನಿಪ ಇದ ಮುಟ್ಟಲಳವಲ್ಲ ||
ವೇದದಿಂದುದ್ಧರಿಸಿ ನಿನಗೀ |
ಬೋಧನೆಯ ಗೈದಿರುವೆ ನಿಜವಿದು |
ವಾದವಿದಕಿನ್ನಿಲ್ಲ ನೃಪತಿಯೆ |
ಮೇದಿನಿಯೊಳೆಂದೆನಲು ಪೇಳಿದ || ೩ || [೧೧೫]

**ಭಾಮಿನಿ**

ಕಾಳಹಸ್ತಿ ಮುನೀಂದ್ರಗೆರಗುತ |
ಭೂಲಲಾಮನು ನುಡಿದ ಗುರುವರ |
ಪೇಳು ತನಗಾ ವಿಶ್ವಕರ್ಮನ ಸಗುಣಲೀಲೆಯನು ||
ಕೇಳಬೇಕೆಂಬಾಸೆ ಪುಟ್ಟಿದೆ |
ಜಾಲವಲ್ಲೆಂದೆನಲು ಕೇಳುತ |
ಲೀಲೆಯಿಂದಲಿ ಕಾಳಹಸ್ತಿಯು ನೃಪತಿಗಿಂತೆಂದ || ೧ || [೧೧೬]

**ಸಾವೇರಿ - ಝಂಪೆ**
ಪೃಥ್ವಿಪತಿ ಲಾಲಿಪುದು | ವಿಶ್ವಕರ್ಮನ ಸಗುಣ |
ವೃತ್ತಾಂತಗಳನೈದು ವಿಧದಿ ||
ಬಿತ್ತರಿಸೆ ವಿಶ್ವವೈ | ರಾಟ ಶಿವರೂಪ ಕೇ |
ಳಿತ್ತಪರ ವಿಶ್ವಕರ್ಮೆನುತ || ೧ ||
ಭೂತಳಾಧಿಪ ಕೇಳು | ಕೋಟಿಸೂರ್ಯರ ಪ್ರಭೆಯ |
ನೀತ ಮೀರಿಸಿ ಬೆಳಗುತಿಹನು ||
ಪಾತಾಳವೇ ಪಾದ | ಬ್ರಹ್ಮಾಂಡವೇ ನಾಭಿ |
ಆತನಿಗೆ ಪೀಠವೀ ಭೂಮಿ || ೨ ||
ರವಿಚಂದ್ರರಕ್ಷಿಗಳು | ಪಾವಕನೆ ಶಿರ ನೋಡೆ |
ವಿವಿಧ ದೆಸೆಗಳು ಕಿವಿಗಳವಗೆ ||
ಅವನೀಶ ಕೇಳು ನಭ | ದೊಳಗಿರುವ ತಾರೆಗಳು |
ಭವನಾಶಕಗೆ ಪುಷ್ಪಮಾಲೆ || ೩ ||
ಜನಪ ಕೇಳಿಂತಿಪ್ಪ | ವಿಶ್ವಕರ್ಮನ ಮುಖದಿ |
ಜನಿಸಿದರು ಪಂಚಮೂರ್ತಿಗಳು ||
ಮನುಮಯರು ತ್ವಷ್ಟ್ರ ಶಿ | ಲ್ಪಿಯು ದೈವಜ್ಞರುಗಳೆಂ |
ದೆನುತ ಅವರಿಂಗೆ ಪೆಸರಾಯ್ತು || ೪ ||
ಮನುವಿನಿಂದಾಗಸವು | ಜನಿಸಲ್ಕೆ ಮಯನಿಂದ |
ಅನಿಲನುದಿಸಲು ಬಳಿಕ ತ್ವಷ್ಟ್ರ||
ಸನುಮತದಿ ತೇಜವನು | ಶಿಲ್ಪಿ ಜಲವನು ದೈವ |
ಜ್ಞನು ಪೃಥ್ವಿಯನು ನಿರ್ಮಿಸಿದರು || ೫ ||
ಸೃಷ್ಟಿ ಸ್ಥಿತಿ ಲಯ ತಿರೋ | ಧಾನನುಗ್ರಹವೆಂಬ |
ಶ್ರೇಷ್ಠ ಕಾರ್ಯವು ಇವರದಾಯ್ತು ||
ಸೃಷ್ಟಿಪತಿ ಲಾಲಿಪುದು | ಶ್ರೇಷ್ಠ ಕೈವಲ್ಯಪದ |
ಗಿಟ್ಟಿಸುವ ಬಗೆಯ ನೀನಿಂದು || ೬ || [೧೨೪]

**ಭಾಮಿನಿ**
ಭಕ್ತಿ ಜ್ಞಾನವು ಕರ್ಮವೆಂಬೀ |
ಉತ್ತಮದ ಪಥ ಮೂರು ನೃಪತಿಯೆ |
ನಿತ್ಯಮಂಗಲರೂಪನನು ಸೇರುವಡೆ ಕೇಳಿಂದು ||
ಮರ್ತ್ಯಲೋಕದ ಜನಕಯೆಂಬೀ |
ತತ್ವಸಾರವ ತಿಳಿದುಕೊಳ್ಳೈ |
ಚಿತ್ತದಲಿ ಶಂಕಿಸದೆ ಎಂದನು ಕಾಳಹಸ್ತಿಮುನಿ || ೧ || [೧೨೫]

**ಸೌರಾಷ್ಟ್ರ - ತ್ರಿವುಡೆ**
ಕಾಳಹಸ್ತಿ ಮುನೀಂದ್ರನಿಂತಾ |
ಭೂಲಲಾಮಗೆ ವಿಶ್ವಕರ್ಮನ |
ಮೇಲೆನಿಪ ತತ್ವಗಳ ಬೋಧಿಸೆ | ಲೀಲೆಯಿಂದ || ೧ ||
ಧರಣಿಪತಿ ಈ ಪರಮಚರಿತೆಯ |
ಹರುಷದಿಂದಾಲಿಸುತ ಮುನಿಪಗೆ |
ಎರಗಿ ಪೇಳಿದ ಧನ್ಯನಾದೆನು | ಗುರುವರೇಣ್ಯ || ೨ ||
ಪರಮಪಾವನವಾದ ಚರಿತೆಯ |
ನೊರೆದು ಭವಸಾಗರವ ದಾಂಟಿಸಿ |
ಹರುಷದಿಂ ತೋರಿಸಿದೆ ಮುಕ್ತಿಗೆ | ಇರುವ ಹಾದಿ || ೩ ||
ಸುರನದಿಯು ಪ್ರವಹಿಸುವ ಕಾಶಿಯು |
ಪರಮಪಾವನವಾಯ್ತು ಮುನಿಪನೆ |
ವರಜಗದ್ಗುರು ಪಟ್ಟಕಟ್ಟುವೆ | ನಿನಗೆ ಇಲ್ಲೆ || ೪ ||

ವಿರಚಿಪೆನು ಪಟ್ಟಾಭಿಷೇಕವ |
ಹರುಷದಿಂದಪ್ಪಣೆಯ ಕೊಡು ಎಂ |
ದೆರಗಿದರೆ ಮುನಿಪತಿಯು ನೃಪನಿಗೆ | ಒರೆದ ಮುದದಿ || ೫ ||
ಮೆಚ್ಚಿದೆನು ಧರಣಿಪನೆ ಈ ಪರಿ |
ಭಕ್ತಿಭಾವಕೆ ಕೇಳು ನಿನ್ನಯ |
ಇಚ್ಛೆಯನು ಪೂರೈಸೆ ಒಪ್ಪಿಗೆ | ಇತ್ತೆ ನಾನೆ || ೬ ||
ಮೆರೆವ ಸಪ್ತರ್ಷಿಗಳ ಕರೆಯಿಸು |
ಧರಣಿಪರಿಗೋಲೆಯನು ಕಳುಹಿಸು |
ವಿರಚಿಸಲು ಪಟ್ಟಾಭಿಷೇಕವ | ತ್ವರಿತದಿಂದ || ೭ ||
ಮೆರೆವ ಶುಭಲಗ್ನದಲಿ ಪಟ್ಟವ |
ವಿರಚಿಸಲು ಬರೆದೋಲೆ ಕಳುಹಿದ |
ಧರಣಿಪನ ಕರೆಯಂತೆ ನೆರೆದರು | ಸರುವ ಮಂದಿ || ೮ || [೧೩೩]

**ವಾರ್ಧಕ**

ಫಾಲನೇತ್ರನ ಅಂಶಜಾತನೆನಿಸಿಪ್ಪ ವರ |
ಕಾಳಹಸ್ತಿಗೆ ನಡೆವ ಪಟ್ಟಾಭಿಷೇಕವನು |
ಲೀಲೆಯಿಂ ನೋಡುವರೆ ಅಜಮುಖ್ಯ ಸುರರೆಲ್ಲ ನೆರೆದರೈ ಸಂಭ್ರಮದಲಿ ||
ಪೇಳಲೇನಾ ಸಮಯ ಕೂಡಿಪ್ಪ ಋತ್ವಿಜರ |
ಜಾಲ ವೇದೋಕ್ತ ಮಂತ್ರವ ಪಠಿಸೆ ಮುದದಿಂದ |
ಮೇಲೆನಿಪ ಆ ಮಹೋತ್ಸವ ನಡೆಯಿತಂದು ವರವಾರಣಾಸಿಯ ಮಧ್ಯದಿ || [೧೩೪]

**ಭಾಮಿನಿ**

ಮೆರೆವ ಸಪ್ತರ್ಷಿಗಳು ಮುದದಲಿ |
ವಿರಚಿಸಲು ಪಟ್ಟಾಭಿಷೇಕವ |
ಸರಸಿಜಾಸನ ಮುಖ್ಯ ಸುಮನಸರೆಲ್ಲ ಮುದದಿಂದ ||
ಸುರಿಯೆ ಸುಮಮಳೆಯನ್ನು ಬಳಿಕಾ |
ಧರಣಿಪತಿ ಹರ್ಷಾಶ್ರು ತುಂಬಿರೆ |
ಗುರುವರೇಣ್ಯನ ಪಾದಕೆರಗಲು ಹರಸಿ ಮನ್ನಿಸಿದ || ೧ || [೧೩೫]

**ಮಂಗಲಾಚರಣ**

**ವಾರ್ಧಕ**

ಲಾಲಿಪುದು ಸಜ್ಜನರು ಭೂಲಲಾಮನಿಗಂದು |
ಕಾಳಹಸ್ತಿಯು ಪೇಳ್ದ ವಿಶ್ವಕರ್ಮನ ದಿವ್ಯ |
ಲೀಲಾವಿನೋದವನು ಯಕ್ಷಗಾನದಿ ಬರೆದೆ ಅಗರಿ ಭಾಸ್ಕರನು ನಾನು ||
ತಾಳ ಲಯ ಮಾತ್ರೆಗಳ ವಿವರಗಳ ತಿಳಿಯದೀ |
ಬಾಲಕನ ಕೃತಿಯೊಳಿಹ ತಪ್ಪುಗಳ ಭಾವಿಸದೆ |
ಲೀಲೆಯಿಂ ಮೆರೆಸುವುದು ಇಳೆಯೊಳಗೆ ವಿಶ್ವಕರ್ಮನು ಮಂಗಲವನೀಯಲಿ || ೧ || [೧೩೬]

**ಮಂಗಲಪದ**

ಗುಂಡಬಾಳದಲಿ ನಿಂತವಗೆ |
ರುಂಡಮಾಲ ಸಖ ವೇಂಕಟಗೆ |
ಕೊಂಡಾಡುವೆ ನಾ ನಗಜೆಗೆ ಗುಹನಿಗೆ |
ಪುಂಡರಿಕಾಕ್ಷನ ವಲ್ಲಭೆಗೆ || ಮಂಗಲಂ || ೧ ||
ಯಕ್ಷಗಾನಪ್ರಿಯ ಮಾರುತಿಗೆ |
ದಕ್ಷವೈರಿ ಸುತ ಗಣಪನಿಗೆ ||
ಶಿಕ್ಷಿಸಿಕುಜನರ | ರಕ್ಷಿಪ ಸುಜನರ |
ಲಕ್ಷ್ಮೀವರ ಶ್ರೀ ವೆಂಕಟಗೆ || ಮಂಗಲಂ || ೨ || [೧೩೮]

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪೇರಂಜೆ ಕೃಷ್ಣ ಭಟ್ಟ, ಸೇವಧಿ ಪ್ರಕಾಶನ

**ಪ್ರಸಂಗ ಪ್ರತಿ ಆಧಾರ:** ಪ್ರಸಂಗಕರ್ತರ ಮೂಲ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಅಗರಿ ಭಾಸ್ಕರ ರಾವ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಬರವಣಿಗೆ:** ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ